(ಇಂದು ದಿನಾಂಕಃ 14-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಎಸ್ ವಕೀಲರಿಂದ ಃ**

1. ದ್ರೌಪತಿ ಜಗದೇವಿ ಮತ್ತು ಮಲ್ಲಮ್ಮರವರ ಕುಟುಂಬದ ಬಗ್ಗೆ ನನಗೆ ಎಲ್ಲಾ ಗೊತ್ತಿರುತ್ತದೆ. ಇವರ ತಂದೆ ಮಲಪ್ಪರವರನ್ನು ನಾನು ನೋಡಿರುತ್ತೇನೆ. ಇವರ ತಂದೆ ಮಲಪ್ಪರವರು ಎಷ್ಟು ಮದುವೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಅವರಿಗೆ ಇಬ್ಬರು ಹೆಂಡತಿಯರು ಎಂದು ಹೇಳುತ್ತಾರೆ. ಮಲಪ್ಪರವರ ಮೊದಲನೇ ಹೆಂಡತಿಯ ಹೆಸರು ಗೊತ್ತಿಲ್ಲ. ಮಲಪ್ಪರವರಿಗೆ 3 ಹೆಂಡತಿಯರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮಲಪ್ಪರವರ ಮೊದಲನೇ ಹೆಂಡತಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಪೊಲಕಪಳ್ಳಿಯಲ್ಲಿ ಇರುವ ಹೆಂಡತಿಗೆ 5 ಜನ ಮಕ್ಕಳು ಎಂದರೆ ನನಗೆಗೊತ್ತಿಲ್ಲ. ಅಲ್ಲಿರುವ ಹೆಂಡತಿಯ ಹೆಸರು ಏನು ಎಂದರೆ ನನಗೆ ಗೊತ್ತಿಲ್ಲ. ಪೊಲಕಪಳ್ಳಿಯಲ್ಲಿ ಇರುವ ಹೆಂಡತಿಯ ಹೆಸರು ನಾಗಮ್ಮ ಇತ್ತು ಮತ್ತು ಚಿಮ್ಮಇದಲಾಯಿ ಗ್ರಾಮದಲ್ಲಿ ಇರುವ ಹೆಂಡತಿಯ ಹೆಸರು ನಾಗಮ್ಮ ಇತ್ತು ಎಂದರೆ ನನಗೆ ಗೊತ್ತಿಲ್ಲ. ಮಲ್ಲಪ್ಪರವರಿಗೆ ಎಷ್ಟು ಊರಿಗಳಲ್ಲಿ ಜಮೀನು ಇತ್ತು ಎಂದರೆ ಸಾಕ್ಷಿ ಚಿಮ್ಮಇದಲಾಯಿ ಗ್ರಾಮದಲ್ಲಿ ಇರುವ ಬಗ್ಗೆ ಗೊತ್ತು ಎಂದು ಹೇಳುತ್ತಾರೆ. ಪೊಲಕಪಳ್ಳಿಯಲ್ಲಿ ಇರುವ ಹೆಂಡತಿಗೆ ಮಲ್ಲಪ್ಪರವರು ಪಾಲು ಕೊಟ್ಟಿರುತ್ತಾರೆ. ಮಲ್ಲಪ್ಪರವವರು ಬದುಕಿದ್ದಾಗಲೆ ತನ್ನ ಮಕ್ಕಳಿಗೆ ಪಾಲು ಮಾಡಿಕೊಟ್ಟಿರುತ್ತಾರೆ. ಮಲ್ಲಪ್ಪರವವರು ಬದುಕಿದ್ದಾಗಲೆ ತನ್ನ ಮಕ್ಕಳಿಗೆ ಪಾಲು ಮಾಡಿಕೊಟ್ಟಿದ್ದರಿಂದ ಅವರವರ ಪಾಲನ್ನು ಅವರು ಮಾಡಿಕೊಂಡು ಉಣ್ಣುತ್ತಿದ್ದಾರೆ ಎಂದರೆ ಸರಿ. ಮಲ್ಲಪ್ಪರವವರು ಬದುಕಿದ್ದಾಗಲೆ ತನ್ನ ಮಕ್ಕಳಿಗೆ ಪಾಲು ಮಾಡಿಕೊಟ್ಟ ನಂತರ ಕೆಲವರು ತಮ್ಮ

ಪಾಲನ್ನು ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 8 ರಲ್ಲಿ ದ್ರೌಪತಿಯ ಗಂಡ ಮಲ್ಲಿಕಾರ್ಜುನ ಕೂಡ 8 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಗೌನಳ್ಳಿ ಕ್ರಾಸಗೆ ಇರುವ ಜಮೀನನ್ನು ಒಬ್ಬ ಮುತ್ಯ ಪ್ರತಿವಾದಿ 7 ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತನ್ನ ಪಾಲಿಗೆ ಬಂದ ಜಮೀನನ್ನು ಮಲ್ಲಮ್ಮ ಮಸ್ತಾನಸಾಬರವರಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ಸರಿ. ಮನೆಗಳು ಬೇರೆ ಬೇರೆ ಆಗಿ ಬೇರೆ ಬೇರೆ ಮನೆ ಸಂಖ್ಯೆ ಆಗಿದೆ ಎಂದರೆ ಸರಿ. ನನಗೆ ಏನು ಗೊತ್ತಿಲ್ಲದಿದ್ದರು ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಡುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.